# ಗಾಡ್ ಫಾದರ್ / ಸರ್ಕಾರ್

"ಡಾನ್ ವಿಟೋ ಕಾರ್ಲೆಯೊನ್ ಎಲ್ಲರ ಸಹಾಯ ಮಾಡುತಿದ್ದ. ಸಹಾಯಕ್ಕಾಗಿ ಅವನ ಬಳಿ ಬಂದವರು ಬರಿಗೈಲಿ ಹಿಂತಿರುಗುತ್ತಿರಲಿಲ್ಲ. ಅವನು ಯಾವತ್ತೂ ಸುಳ್ಳು ಆಶ್ವಾಸನೆಗಳನ್ನು ಕೊಡುತ್ತಿರಲಿಲ್ಲ. ಒಪ್ಪಿಕೊಂಡ ಕೆಲಸ ಮಾಡಲಾಗದೇ ತನಗೂ ಮೀರಿದ ಶಕ್ತಿಯೊಂದು ತನ್ನ ಕೈ ಕಟ್ಟಿಹಾಕಿದೆಯೆಂಬಂತ ಖೊಟ್ಟಿ ಕಾರಣವನ್ನೂ ಕೊಡುತ್ತಿರಲಿಲ್ಲ. ನಿಮ್ಮ ಸ್ನೇಹಿತನಾಗಿರದಿದ್ದರೂ, ಸಹಾಯಕ್ಕೆ ಪ್ರತಿಯಾಗಿ ಅವನಿಗೆ ಕೊಡಲು ನಿಮ್ಮಲ್ಲಿ ಏನೂ ಇರದಿದ್ದರೂ ಅವನು ಅದನೆಲ್ಲ ಲೆಕ್ಕಿಸುತ್ತಿರಲಿಲ್ಲ. ಅವನು ಬಯಸುತಿದ್ದುದು ಒಂದೇ, ನೀವು ನೀವಾಗಿಯೇ ಸ್ನೇಹ ಹಸ್ತ ಚಾಚಬೇಕು, ನಂತರ ಆ ಸಹಾಯಾರ್ಥಿ ಎಷ್ಟೇ ಬಡವನಾಗಿದ್ದು, ಅಶಕ್ತನಾಗಿದ್ದರೂ ಅವನ ಕಷ್ಟಗಳನ್ನು ತನ್ನ ಕಷ್ಟವೆಂಬಂತೆ ಮನಸಿಗೆ ಹಚ್ಚಿಕೊಳ್ಳುತ್ತಿದ್ದ. ಮತ್ತು ಸಮಸ್ಯೆಯ ಪರಿಹಾರಕ್ಕೆ ಯಾವುದೇ ಅಡ್ಡಿ ಆತಂಕಗಳು ಬಾರದಂತೆ ನೋಡಿಕೊಳ್ಳುತ್ತಿದ್ದ. ಇದೆಲ್ಲದರಿಂದ ಅವನಿಗೆ ಸಿಗುತಿದ್ದುದು? – ಸ್ನೇಹ, ಗೌರವಪೂರಕವಾದ 'ಡಾನ್' ಎಂಬ ಪದವಿ, ಕೆಲವೊಮ್ಮೆ ಅದಕ್ಕೂ ಮಿಗಿಲಾದ ಪ್ರೀತಿ ತುಂಬಿದ 'ಗಾಡ್‌ಫಾದರ್' ಎಂಬ ಪದನಾಮ."

**–ಗಾಡ್ ಫಾದರ್**

'ಗಾಡ್ ಫಾದರ್' ಮಾರಿಯೋ ಪ್ಯೂಜೊನ ಅತ್ಯುತ್ತಮ ಕಾದಂಬರಿಗಳಲ್ಲೊಂದು. ಪ್ರಕಟವಾದಾಗಿನಿಂದ(೧೯೬೯) ಅರವತ್ತೇಳು ವಾರ ಅದು ಪ್ರತಿಷ್ಟಿತ ನ್ಯೂಯಾರ್ಕ್ ಟೈಮ್ಸ್‌ನ ಬೆಸ್ಟ್ ಸೆಲ್ಲರ್ಸ್ ಪಟ್ಟಿಯಲ್ಲಿತ್ತು! ಮಹಾನಗರಿಯ ಭೂಗತ ಜಗತ್ತನ್ನು ಆಳುವ ಡಾನ್, ಅವನ ಕುಟುಂಬ, ಅವನ ಸಿದ್ಧಾಂತಗಳು, ವಿರೋಧಿ ಗುಂಪುಗಳ ಒಳಸಂಚು, ಇದೇ ಮೂಲವಸ್ತುವಾಗಿರುವ 'ಗಾಡ್ ಫಾದರ್' ಮೂರು ಚಲನಚಿತ್ರಗಳಾಗಿಯೂ ಬಂತು, ಪ್ಯೂಜೋಗೆ ಹಣ, ಹೆಸರು ಹಾಗೂ ಎರಡು ಆಸ್ಕರ್ ಪ್ರಶಸ್ತಿಗಳನ್ನೂ (ಜೊತೆಗೆ ಒಂದು ಆಸ್ಕರ್ ನಾಮಕರಣವನ್ನೂ) ತಂದುಕೊಟ್ಟಿತು. 'I'll make him an offer he can't refuse' ಎಂಬ 'ಗಾಡ್‌ಫಾದರ್'ನ ಒಂದು ವಾಕ್ಯ ಅಮೇರಿಕಾದಲ್ಲಿ ಬಹಳಷ್ಟು ಜನಪ್ರಿಯವಾಯಿತು. ಅಂತಹ ಮಾರಿಯೋ ಪ್ಯೂಜೊ ಸತ್ತು ಮೊನ್ನೆ ಜುಲೈ ಒಂಬತ್ತಕ್ಕೆ ಆರು ವರ್ಷ.

'ಗಾಡ್‌ಫಾದರ್'ಗೆ ನಾಲ್ಕು ಜನ ಮಕ್ಕಳು, ದೊಡ್ಡವನು ಸನ್ನಿ, ಮುಂಗೋಪಿ, ಅಪ್ಪನ ಸಾಮ್ರಾಜ್ಯದಲ್ಲಿ ಸೇನಾಧಿಪತಿ, ಮೂರನೆಯವನು ಕೆಲಸಕ್ಕೆ ಬಾರದ ಜೂಜುಕೋರ. 'ಗಾಡ್‌ಫಾದರ್'ನ ಪ್ರೀತಿಯ ಎರಡನೆಯ ಮಗ ಮೈಕಲ್ ಅಪ್ಪನ ಈ ಎಲ್ಲ ಜಂಜಡದಿಂದ ದೂರ, ಓದುತ್ತಿರುತ್ತಾನೆ, ಎಲ್ಲರಿಗಿಂತ ಕಿರಿಯವಳು ವಿನ್ನಿ. ಇವರಲ್ಲದೇ 'ಗಾಡ್‌ಫಾದರ್'ಗೆ ನೂರಾರು ಜನ ಸಾಕು ಮಕ್ಕಳು, ಅದರಲ್ಲಿ ಒಬ್ಬ ಹಾಲಿವುಡ್‌ನ ತಾರೆ, ಇನ್ನೊಬ್ಬ ಕ್ಲೆಮೆಂಜಾ, ಅವನ ಕಾರ್ಯಗಳನ್ನು ಸಂಭಾಳಿಸುವ ಮಂತ್ರಿ; ಇವನು ಮಕ್ಕಳೆಲ್ಲರಿಗಿಂತ ಡಾನ್‌ಗೆ ಹತ್ತಿರ, ಅವನ ಮನಸ್ಸನ್ನು ಅರಿತವನು. ಹೀಗಿರುವಾಗ ಒಂದು ಕಳ್ಳಸಾಗಾಣಿಕೆ ಕೆಲಸಕ್ಕೆ ಸಹಕರಿಸಲೊಪ್ಪದ ಡಾನ್ ಮೇಲೆ ಕೊಲೆಯ ಯತ್ನ ನಡೆಯುತ್ತದೆ, ತಂಗಿಯ ಮದುವೆಗೆ ಬಂದ ಇದೆಲ್ಲದರಿಂದ ದೂರವಿದ್ದ ಎರಡನೆಯ ಮಗ ಮೈಕಲ್ ಕೊಲೆಯೊಂದನ್ನು ಮಾಡಿ, ನಗರದಿಂದ ದೂರ, ಡಾನ್‌ಗೆ ಗೊತ್ತಿದ್ದ ರಾಜ್ಯವೊಂದರಲ್ಲಿ ಅಡಗಿಕೂರುತ್ತಾನೆ. ಅಪ್ಪನ ಅಂಕೆಯಿಲ್ಲದೇ ದುಡುಕುವ ದೊಡ್ಡಣ್ಣ ಸನ್ನಿಯ ಕೊಲೆಯಾಗುತ್ತದೆ, ಡಾನ್ ಆಸ್ಪತ್ರೆಯಿಂದೆದ್ದು ಬಂದು ತನ್ನ ವಿರೋಧಿ ಬಣದವರೊಂದಿಗೆ ಸಂಧಾನ ಮಾಡಿಕೊಳ್ಳುತ್ತಾನೆ; ಭೂಗತನಾಗಿದ್ದ ಎರಡನೆಯ ಮಗನನ್ನು ಕರೆತಂದು ತನ್ನ ಜೊತೆಯಿಟ್ಟುಕೊಳ್ಳುತ್ತಾನೆ, ಆಗ ಶುರುವಾಗುತ್ತದೆ, ನಿಜವಾದ ಚದುರಂಗದಾಟ!

ಇಟಲಿಯಿಂದ ವಲಸೆಬಂದ 'ಗಾಡ್‌ಫಾದರ್'ನ ಪ್ರೀತಿ–ವಾತ್ಸಲ್ಯ, ದ್ವೇಷ–ಅಪರಾಧ, ಕುಟುಂಬದ ನಂಬಿಕೆಗಳು ಎಲ್ಲವೂ ಮಾರಿಯೊ ಬರೆದ ಕಾದಂಬರಿಯಲ್ಲಿ ಹದವಾಗಿ ಬೆರೆತಿವೆ, ಬರೀ ಸನ್ನಿವೇಶಗಳಿಂದ ಕತೆ ಬೆಳೆದು, ಒಂದು ನಿರ್ಣಾಯಕ ಅಂತ್ಯ ತಲುಪುವುದನ್ನು ನೀವು ಅನುಭವಿಸಬೇಕೆಂದರೆ ನೀವು ಗಾಡ್‌ಫಾದರ್ ಓದಬೇಕು. ಜೊತೆಗೆ ಮೂರು 'ಗಾಡ್‌ಫಾದರ್' ಚಿತ್ರಗಳನ್ನು ನೋಡಬೇಕು(ಕೊನೆಯ ಸಿನೆಮಾ ಯಾವುದೇ ಕಾದಂಬರಿ ಆಧಾರಿತವಲ್ಲ), ಹಾಲಿವುಡ್‌ನಲ್ಲಿ ಯಾಕೆ ಮರ್ಲನ್ ಬ್ರಾಂಡೊ, ಅಲ್ ಪ್ಯಾಕಿನೊ ಇಬ್ಬರ ನಟನಾ ಶೈಲಿಯನ್ನು ಅತ್ಯದ್ಭುತ ಅನ್ನುತ್ತಾರೆ ಅನ್ನುವುದು ಗೊತ್ತಾಗುತ್ತದೆ (ನಮ್ಮ ಕಮಲ್‌ಹಾಸನ್ ಕೂಡ ಮರ್ಲನ್ ಬ್ರಾಂಡೊನಷ್ಟೇ ಅದ್ಭುತವಾಗಿ ನಟಿಸಬಲ್ಲ ಅನ್ನುತ್ತಾರೆ (ಚಿತ್ರ:ನಾಯಗನ್)). ಮತ್ತು ಕೊನೆಯದಾಗಿ ನೀವು ರಾಮ್ ಗೋಪಾಲ್ ವರ್ಮಾನ 'ಸರ್ಕಾರ್' ನೋಡಬೇಕು.

ಅಮಿತಾಬ್ ಮತ್ತೆ ತಾನು ಬಿಟ್ಟು ಹಿಂದೆ ಸರಿದಿದ್ದ ಸುಪರ್‌ಸ್ಟಾರ್ ಸಿಂಹಾಸನದಲ್ಲಿ ಕುಳಿತಿದ್ದಾರೆ, ಹಳೆಯ ಸೋಲುಗಳನ್ನೆಲ್ಲ ಮರೆತು, ಕೆಬಿಸಿಯಿಂದ ಮತ್ತೆ ಹೊಸದಾಗಿ ಜೀವನವನ್ನೇ ಶುರುಮಾಡಿದ ಅಮಿತಾಬ್ ತನ್ನ ಹಳೆಯ ಇಮೇಜಿನ ಹಂಗಿಲ್ಲದೇ ಸರ್ಕಾರ್‌ನಲ್ಲಿ 'ಸರ್ಕಾರ್' ಆಗಿ ಮೆರೆದಿದ್ದಾರೆ ಅವರ ವಯಸ್ಸು ಮತ್ತು ನಟನಾ ಚಾತುರ್ಯಕ್ಕೆ ಸರ್ಕಾರ್ ಒಂದು ಸವಾಲು, ಮತ್ತು ಸವಾಲನ್ನು ಅವರು ಜಯಿಸಿದ್ದಾರೆ. ಜೊತೆಗೆ ಅಮಿತಾಬ್ ಜೂನಿಯರ್ ಅಭಿಷೇಕ್ ಮುಂದಿನ ಪೀಳಿಗೆಯ ಸೂಪರ್‌ಸ್ಟಾರ್ ತಾನು ಆಗಬಲ್ಲೆ ಎಂದು ತೋರಿಸಿದ್ದಾರೆ! ಯಾರು ಏನೇ ಹೇಳಲಿ, ಬಾಳ್ ಠಾಕ್ರೆಗೂ

ಸರ್ಕಾರ್ ಚಿತ್ರಕ್ಕೂ ಅಂಥಾ ಸಂಬಂಧವೇನಿಲ್ಲ. ಬಹುಶಃ ಅಮಿತಾಬ್‌ನ ಮ್ಯಾನರಿಸಂಗಳು, ಮತ್ತು ಕೆಲವು ಪಾತ್ರಗಳು ಠಾಕ್ರೆಯ ನಿಜಜೀವನವನ್ನು ಹೋಲಬಹುದೇನೋ. ಇದರ ಜೊತೆಗೆ ಬಹಳ ದಿನಗಳ ನಂತರ ತಾನೇ ಖುದ್ದು ನಿರ್ದೇಶನಕ್ಕಿಳಿದಿರುವ ವರ್ಮಾ ಕತೆಯಲ್ಲಿ ಕೆಲವು ಬದಲಾವಣೆಗಳನ್ನು ಮಾಡಿಕೊಂಡಿದ್ದಾರೆ. ಸರ್ಕಾರ್‌ಗೆ ಇಬ್ಬರೇ ಗಂಡು ಮಕ್ಕಳು, ಮೊದಲನೆಯವನು ಅಪ್ಪನ ಧೋರಣೆಗಳನ್ನು ಹಿಯಾಳಿಸುವ, ದ್ವೇಷಿಸುವವನು, ಎರಡನೆಯವನು ಅಭಿಷೇಕ್, ಅಮೇರಿಕಾದಲ್ಲಿ ಓದು ಮುಗಿಸಿ ವಾಪಸ್ಸು ಬಂದವನು. ಇಡೀ ಸಿನೆಮಾ, ಮೂಲಕತೆಯಂತೆ ಅಪ್ಪ–ಮಗನ ನಡುವಿನ ಪ್ರೀತಿ–ನಂಬಿಕೆಗಳ ಕತೆಯಂತೇ ಹರಿದು ಬಂದಿದೆ. ಚಿತ್ರದ ಪ್ರತಿಯೊಂದು ಪಾತ್ರಗಳೂ ನಿಜವಾಗಿಯೂ ಪೋಷಕಪಾತ್ರಗಳಾಗಿಯೇ ಉಳಿದುಬಿಟ್ಟಿವೆ(ಬಹುಶಃ ವ್ಯರ್ಥವಾದ ಒಬ್ಬ ಕಲಾವಿದ ಅಂದರೆ 'ಅನುಪಮ್ ಖೇರ್' ಕತ್ರಿನಾ ಕೈಫ್‌ಗೆ ನಟನೆ ಗೊತ್ತಿಲ್ಲದಿರುವುದರಿಂದ ಅವಳ ಪಾತ್ರ ವ್ಯರ್ಥವಾಗುವ ಮಾತೇ ಇಲ್ಲ!) ಅತಿಯಾದ ರಕ್ತ–ಹೊಡೆದಾಟ–ಬಡಿದಾಟವಿಲ್ಲದೇ ಭೂಗತಜಗತ್ತಿನ ಒಂದು ಚಿತ್ರವನ್ನು ಹೇಗೆ ಮಾಡಬಹುದು ಎಂದು ಚಿತ್ರ ತೋರಿಸಿಕೊಟ್ಟಿದೆ, ಮುಂಬೈನಲ್ಲಿ 'ಸರ್ಕಾರ್'ನ ಮನೆ, ಅವನ ಅಪ್ಪಟ ಮಹಾರಾಷ್ಟ್ರಿಯನ್ ಹೆಂಡತಿ, ಉಢಾಳ, ಉದ್ದಟನಾದ ದೊಡ್ಡಮಗ, ಪ್ರೀತಿಪಾತ್ರನಾದ ಚಿಕ್ಕಮಗ, ಮಗಳಿಗಿಂತ ಹೆಚ್ಚಾಗಿ ಪ್ರೀತಿಸುವ ದೊಡ್ಡ ಸೊಸೆ, ಮೊಮ್ಮಕ್ಕಳು, ಎಲ್ಲವೂ 'ಗಾಡ್‌ಫಾದರ್'ನನ್ನು ನೆನಪಿಸುತ್ತವೆ (ಒಂದೇ ಕೊರತೆ: ಸರ್ಕಾರ್‌ಗೆ ಗಾಡ್‌ಫಾದರ್‌ಗಿದ್ದಂತೆ ಒಬ್ಬ ಸಶಕ್ತ ಮಂತ್ರಿ (ಪೀಟರ್ ಕ್ಲೆಮೆಂಜಾ) ಇಲ್ಲದಿರುವುದು)). ಹಿನ್ನಲೆ ಸಂಗೀತ ಕೆಲವೊಮ್ಮೆ ಅಬ್ಬರವಾಯಿತೆನಿಸಿದರೂ(ಹಿನ್ನಲೆ ಸಂಗೀತವೇ ಇಲ್ಲದ 'ಗಾಡ್‌ಫಾದರ್'ನ ಸನ್ನಿವೇಶಗಳಿಗೆ ಹೋಲಿಸಿದರೆ), ನಮ್ಮ ಭಾರತೀಯ ಮನಸಿಗೆ ಭಾವನೆಗಳ ಅಬ್ಬರಕ್ಕೆ ಹಿನ್ನಲೆ ಸಂಗೀತವೂ ಹಾಗೇ ಇರಬೇಕು ಅನಿಸುತ್ತದೆ,

ಚಿತ್ರದ ಶುರುವಿನಲ್ಲೇ ರಾಮ್ ಗೋಪಾಲ್ ವರ್ಮಾ ಗಾಡ್‌ಫಾದರ್‌ನ್ನು ನೆನೆದು ಸರ್ಕಾರ್ ಚಿತ್ರ ಅದಕ್ಕೊಂದು ಅರ್ಪಣೆ ಅನ್ನುತ್ತಾರೆ. ಸರ್ಕಾರ್ ನೋಡಿದರೆ ಆ ಅರ್ಪಣೆ ಸಶಕ್ತವಾಗಿಯೇ ಅರ್ಪಿತವಾಗಿದೆ ಅನ್ನುವುದು ಗೊತ್ತಾಗುತ್ತದೆ!

(ಅವನ ಕತೆಗಳ ಹರಹು, ಬರವಣಿಗೆಯ ಶೈಲಿಯಿಂದಾಗಿ, ಪಾತ್ರಗಳ ಚಿತ್ರಣದಿಂದಾಗಿ 'ಮಾರಿಯೋ ಪ್ಯೂಜೊ' ನನ್ನ ಅಚ್ಚು ಮೆಚ್ಚಿನ ಕತೆಗಾರರಲ್ಲಿ ಒಬ್ಬ)